## ಬೆಕ್ಕಿಗೂ ಡೈಪರ್!

ಕೆಲ ದಿನದ ಹಿಂದೆ ತೀರ್ಥಹಳ್ಳಿಯ ಕೋದಂಡ ರಾಮ ದೇವಸ್ಥಾನದ ಅರ್ಚಕರ ಮನೆಗೆ ಹೋದಾಗ ಬೆಕ್ಕೊಂದು ತೆವಳಿ ತೆವಳಿ ಹೋಗುತ್ತಿತ್ತು.ಹಿಂದಿನ ಕಾಲುಗಳು ಸ್ವಾಧೀನ ಕಳಕೊಂಡಿತ್ತು. ಸೂಕ್ಷ್ಮವಾಗಿ ಗಮನಿಸಿದಾಗ ಅದಕ್ಕೆ ಡೈಪರ್ ಹಾಕಿದ್ದು ನೋಡಿ; ವಿಚಾರಿಸಿದಾಗ ‘ಕೆಲ ತಿಂಗಳ ಹಿಂದೆ ಮನೆ ಎದುರಿನ ರಸ್ತೆಯಲ್ಲಿ ಯಾರೋ ಹೊಡೆದು ಹೀಗಾಗಿದೆ’ ಆದಿನದಿಂದ ಅದಕ್ಕೆ ದಿನವೂ ಡೈಪರ್ ಹಾಕಿ ಮಲ, ಮೂತ್ರಕ್ಕೆ ತೊಂದರೆ ಆಗದಂತೆ ಆರೈಕೆ ಮಾಡುತ್ತಿದ್ದ ಒಡತಿ ಸರಸ್ವತಿ ಭಟ್ ಅವರ ಪ್ರಾಣಿ ಪ್ರೀತಿ ನೋಡಿಯೇ ಕನಿಕರ ವಾಯಿತು. ಆ ಬೆಕ್ಕು ಅವರ ಮಾತುಗಳಿಗೆಲ್ಲಾ ಸ್ಪಂದಿಸುತ್ತಿದ್ದದ್ದು ನನ್ನನ್ನು ಮೂಕ ವಿಸ್ಮಿತ ನಾಗಿಸಿತು.

—ನಗರ ಗುರುದೇವ್ ಭಂಡಾರ್ಕರ್, ಹೊಸನಗರ



## ಸೂಟ್ ಕೇಸ್- ಬುಟ್ಟಿ ಬೇಕಾ?

ನಿಸರ್ಗದತ್ತವಾಗಿ ದೊರಕುವ ಬಿದಿರು, ಬೆತ್ತ, ಬಳ್ಳಿ, ಹಿಟ್ಟುಂಡೆ ಹುಲ್ಲು ಇವೇ ಮುಂತಾದವುಗಳಿಂದ ಬುಟ್ಟಿ, ತಟ್ಟಿ, ಜಲ್ಲೆ, ಮೊರ (ಪದಾರ್ಥಗಳನ್ನು ಕೇರುವ ಸಾಧನ), ಚಾಪೆ, ಪೊರಕೆ ಮೊದಲಾದ ಕರಕುಶಲ ವಸ್ತುಗಳನ್ನು ನಿರ್ಮಿಸುವ ಕಲೆಗಾರಿಕೆ ನಮಗೆ ಪ್ರಾಚೀನರ ಕೊಡುಗೆ.

ಇದೀಗ ಈ ಪ್ರಾಚೀನ ಕಲೆಗೆ ನಾವಿನ್ಯತೆಯ ಸ್ಪರ್ಶ ನೀಡಿ ಕರಂಡಕದಿಂದ ಹಿಡಿದು ಬುಟ್ಟಿ, ಹೂದಾನಿ, ಬೀಸಣಿಕೆ, ಪೆಟ್ಟಿಗೆ, ತೊಟ್ಟಿಲು, ವಿವಿಧ ರೀತಿಯ ಚೀಲಗಳು, ಕಿರೀಟಗಳು, ಮುಖವಾಡಗಳು ಹೀಗೆ ನವವಿನ್ಯಾಸದ ನಾನಾ ಬಗೆಯ ಪರಿಕರಗಳನ್ನು ನಿರ್ಮಿಸಲಾಗುತ್ತಿದೆ. ಹಳತು ಹೊಸತೆನಿಸಿ, ಜೀವನ ನಿರ್ವಹಣೆಯ ಕರಕುಶಲ ವೃತ್ತಿಯಾಗಿ ಈ ಕಲೆಗಾರಿಕೆ ವಿಶ್ವ ಪ್ರಸಿದ್ಧವಾಗಿದೆ. ವಸ್ತುಗಳ ತಯಾರಿಕೆಗೆ ಅಗತ್ಯವಾಗಿರುವ ಪ್ರಕೃತಿದತ್ತ ಬಿದಿರು, ಬಳ್ಳಿ, ಬೆತ್ತಗಳೆಲ್ಲ ವಿರಳವಾಗಿರುವ ಹಿನ್ನೆಲೆಯಲ್ಲಿ ಇವು ಈಗ ಮತ್ತಷ್ಟು ಜನ ಮನ ಸೆಳೆಯುತ್ತಿವೆ. ಕರ್ನಾಟಕದ ಆಗುಂಬೆಯ ಹಾದಿಯಿಂದ ಹಿಡಿದು ಆಂಧ್ರಪ್ರದೇಶ, ಕೇರಳಗಳಲ್ಲದೆ, ಇಂಡೋನೇಷ್ಯಾದ ಬಾಲಿಯ ಉಬಡ್ ಪಟ್ಟಣದ ಕಲಾ ಸಂತೆಯ (Ubud Art Market) ಅಂಗಡಿಗಳಲ್ಲಿ ಈ ಕಲೆಗಾರಿಕೆಯ ವೈವಿಧ್ಯತೆಯನ್ನು ಕಾಣಬಹುದು.

—ಎಸ್.ಎನ್. ಚಂದ್ರಕಲಾ ಕೊಪ್ಪ



## ಇದು ಗಾನ ಥ್ರಶ್

ಸುಮಧುರ ಧ್ವನಿಯ ಹಾಡು ಹಕ್ಕಿ, ಕಿತ್ತಳೆ ಬಣ್ಣದ ತಲೆಯ ಥ್ರಶ್. ಇದೊಂದು ಕೇಳುಗರಿಗೆ ಮುದನೀಡುವ ಸುಮಧುರ ಧ್ವನಿಯ ಹಾಡು ಹಕ್ಕಿ. ಟರ್ಡಿಡೇ ಕುಟುಂಬದಲ್ಲಿರುವ ಇದರ ವೈಜ್ಞಾನಿಕ ಹೆಸರು ಜಿಯೋಕಿಚ್ಲ ಸಿಟ್ರಿನಾ ಎಂದಿದೆ. ಆಗ್ನೇಯ ಏಷ್ಯಾ ಮತ್ತು ಭಾರತ ಉಪಖಂಡದಲ್ಲಿರುವ ಅರಣ್ಯದಲ್ಲಿ ಕಂಡು ಬರುತ್ತದೆ. ಛಾಯಾಗ್ರಾಹಕ ವಿಜಯ ಮೈಲಾರ ಅವರ ಕ್ಯಾಮೆರಾ ಕಣ್ಣಿಗೆ ಇದು ಬಿದ್ದಿದೆ.

ತಲೆ, ಹೊಟ್ಟೆಯ ಭಾಗ ಕಿತ್ತಳೆ ಬಣ್ಣ ಮತ್ತು ಕತ್ತು ಬಿಳಿಯಾಗಿದೆ. ಕಣ್ಣಿನ ಪಕ್ಕ ಎರಡು ಕಪ್ಪು ಪಟ್ಟಿಗಳಿವೆ. ಒಂಟಿಯಾಗಿ ಇಲ್ಲವೇ ಜೊತೆಯಾಗಿರುತ್ತವೆ. ಕೀಟಗಳನ್ನು ಸೇವಿಸುತ್ತದೆ. ಗಂಡು– ಹೆಣ್ಣು ಎರಡೂ ಸೇರಿಕೊಂಡು ಎಲೆಗಳಿಂದ ಗೂಡು ಕಟ್ಟುತ್ತವೆ. ಹೆಣ್ಣು ಮೂರರಿಂದ ನಾಲ್ಕು ತತ್ತಿಗಳನ್ನಿಡುತ್ತದೆ. 13ರಿಂದ 14ದಿನಗಳವರೆಗೆ ತತ್ತಿಗೆ ಕಾವು ಕೊಡುತ್ತವೆ. ಮುಂದೆ 12 ದಿನಗಳಲ್ಲಿ ಮರಿಗಳು ಸ್ವತಂತ್ರವಾಗಿ ಹಾರಿ ಹೋಗುತ್ತವೆ.

—ಪ್ರಕಾಶ ಎಸ್. ಮನ್ನಂಗಿ, ಮೋಟೆಬೆನ್ನೂರು

